# ಉಪನಿಷತ್ತುಗಳಲ್ಲಿ ಭಗವದನುಗ್ರಹ

ಸ್ವಾಮಿ ಪ್ರಬುದ್ಧಾನಂದ

*(ಹಿಂದಿನ ಸಂಚಿಕೆಯಿಂದ)*

## ಸತ್ಯತತ್ತ್ವದ ಸಮಗ್ರ ದೃಷ್ಟಿ

ವೈದಿಕ ಋಷಿಗಳು ಸತ್ಯತತ್ತ್ವದ ಸಮಗ್ರ ದೃಷ್ಟಿಯನ್ನು ಹೊಂದಿದ್ದರು. ಈ ದಿವ್ಯಾತ್ಮದ ಆಚೆಗೆ ಏನೂ ಇಲ್ಲವಾದರೂ, ಈ ಚೈತನ್ಯ ಶಕ್ತಿಯೇ, ವೀಕ್ಷಕನ ಪ್ರಜ್ಞಾಹಂತಕ್ಕೆ ಅನುಗುಣವಾಗಿ, ಆತನ ಅಭಿರುಚಿಗೆ ತಕ್ಕಂತೆ, ಹತ್ತುಹಲವು ರೂಪಗಳನ್ನು ಪಡೆಯುವುದನ್ನು ಅವರು ಪರಿಭಾವಿಸಿದರು. ಈ ಆದ್ಯಾಶಕ್ತಿಯು ಯಾವ ನಿಯಮಕ್ಕೂ ಒಳಗಾಗಿಲ್ಲ; ಯಾವ ಸೀಮಿತತೆಗೂ ಸಿಲುಕಿಲ್ಲ. ಅದರ ಅಲ್ಪ ಭಾಗವಷ್ಟೆ, ದೇಶ–ಕಾಲ–ಕಾರಣಗಳಿಂದೊಡಗೂಡಿದ ಈ ವಿಶ್ವವಾಗಿ ಪ್ರಕಟವಾಗಿದೆ. ಉಪನಿಷತ್ತುಗಳು ಕಾವ್ಯಮಯವಾಗಿ ಈ ವಿಚಾರವನ್ನು ಹೀಗೆ ವಿವರಿಸುತ್ತವೆ:

ಹೇಗೆ ಒಂದೇ ಅಗ್ನಿಯು ಈ ಲೋಕವನ್ನು ಪ್ರವೇಶಿಸಿ ಎಲ್ಲ ರೂಪಗಳನ್ನು ಅನುಸರಿಸಿ, ಬಹು ವಿಧವಾಗಿ ಕಾಣಿಸಿಕೊಳ್ಳುತ್ತದೆಯೋ, ಹಾಗೆಯೇ ಎಲ್ಲ ಜೀವಿಗಳಲ್ಲಿಯೂ ಅಂತರಾತ್ಮನು ಶರೀರಭೇದವನ್ನು ಅನುಸರಿಸಿ ಆಯಾ ರೂಪವನ್ನೂ ತಾಳುವನು; ಅದಲ್ಲದೆ ಈ ಲೋಕದ ಹೊರಗೂ ಇರುವನು. *(ಕಠೋಪನಿಷತ್, ೨:೨:೯)*

ಈ ಆತ್ಮವು ಕಿವಿಗೆ ಕಿವಿಯಾಗಿದೆ; ಮನಸ್ಸಿಗೆ ಮನಸ್ಸಾಗಿದೆ; ಮಾತಿಗೆ ಮಾತಾಗಿದೆ; ಪ್ರಾಣಕ್ಕೆ ಪ್ರಾಣವಾಗಿದೆ; ಕಣ್ಣಿಗೆ ಕಣ್ಣಾಗಿದೆ. *(ಕೇನೋಪನಿಷತ್, ೧:೨)*

ಇವನು ಈ ವಿಶ್ವದ ಆತ್ಮನಾಗಿದ್ದಾನೆ. ಇವನು ಜಗತ್ತನ್ನು ಆಳುವ ಈಶ್ವರನು. ಇವನು ಅಮೃತಸ್ವರೂಪನು. *(ಶ್ವೇತಾಶ್ವತರೋಪನಿಷತ್, ೬: ೧೭)*

> ..ಉಪನಿಷತ್ತುಗಳು ನಮ್ಮನ್ನು ಕ್ಷಮಿಸಲಾರದ ಭಯಾನಕ ನಿಯಮಾವಳಿಯನ್ನು ಸಾರುವುದಿಲ್ಲ. ಕಾರ್ಯ–ಕಾರಣ ಸಂಬಂಧದ ಒಂದು ನಿತ್ಯ ಸೆರೆಮನೆಯನ್ನು ಸಾರುವುದಿಲ್ಲ, ಈ ನಿಯಮಾವಳಿಗಳನ್ನು ಮೆಟ್ಟಿನಿಂತಿರುವ, ಜಡ ಚೇತನಗಳ ಅಂತರಾಳದಲ್ಲಿ ಹಾಸುಹೊಕ್ಕಾಗಿರುವ ಒಬ್ಬನನ್ನು ಬೋಧಿಸುವುದು.
> –*ಸ್ವಾಮಿ ವಿವೇಕಾನಂದ*

ಕೆಲವರು ಮೇಧಾವಿಗಳು (ವಸ್ತುವಿನ) ಸ್ವಭಾವವನ್ನು ಜಗತ್ಕಾರಣವೆಂದು ಹೇಳುತ್ತಾರೆ. ಹಾಗೆಯೇ ಅವಿವೇಕಿಗಳಾದ ಇತರರು ಕಾಲವನ್ನು ಜಗತ್ಕಾರಣವೆಂದು ಹೇಳುತ್ತಾರೆ. ಆದರೆ ಲೋಕದಲ್ಲಿ ಯಾವುದು ಈ ಬ್ರಹ್ಮಚಕ್ರವನ್ನು ಸುತ್ತಿಸುವುದೋ ಅದು ಆ ದೇವನ ಮಹಿಮೆಯೇ ಆಗಿದೆ. *(ಶ್ವೇತಾಶ್ವತರೋಪನಿಷತ್ ೬:೧)*

ಭಗವಂತನು ಎಲ್ಲರಲ್ಲೂ ಇರುವ ಪ್ರತ್ಯಗಾತ್ಮಸ್ವರೂಪನಾಗಿದ್ದಾನೆ. ಹೀಗಾಗಿ ಅವನು ಅಧ್ಯಾತ್ಮ ಸಾಧಕನ ಪ್ರಾರ್ಥನೆಗಳಿಗೆ ಅಂತರಂಗದಿಂದಲೇ ಪ್ರತಿಕ್ರಿಯಿಸುತ್ತಾನೆ. ಸಾಧಕನಿಗೆ ದೊರಕುವ ಸಹಾಯವೆಲ್ಲವೂ ಆತನ ಆತ್ಮದ ಆತ್ಮವಾದ ಅಂತರ್ಯಾಮಿ ಚೈತನ್ಯದಿಂದಲೇ ದೊರಕುತ್ತದೆ. ಅದು ಎಲ್ಲದರ ಆತ್ಮವೂ ಆಗಿದೆ.

ಯಾವನು ಸರ್ವಪ್ರಾಣಿಗಳಲ್ಲಿದ್ದು, ಸರ್ವಪ್ರಾಣಿಗಳ ಒಳಗಿರುವನೋ, ಯಾವನನ್ನು ಯಾವ ಜೀವಿಯೂ ತಿಳಿಯದೋ, ಯಾವನಿಗೆ ಸರ್ವಪ್ರಾಣಿಗಳೂ ಶರೀರವೋ, ಯಾವನು ಒಳಗಿದ್ದುಕೊಂಡು ಸರ್ವಪ್ರಾಣಿಗಳನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು, ನಿನ್ನೊಳಗಿನ ಅಮೃತಸ್ವರೂಪಿ ಆತ್ಮನು. *(ಬೃಹದಾರಣ್ಯಕೋಪನಿಷತ್, ೩ :೭ :೧೫)*

ಜ್ಞೇಯವಸ್ತುವಾದ ಈ ಆತ್ಮವಸ್ತುವು ಎಲ್ಲಾ ಇಂದ್ರಿಯಗಳ ಗುಣಗಳಿಂದ ಬೆಳಗುತ್ತಿದೆ. ಆದರೂ ಅದಕ್ಕೆ ಯಾವ ಇಂದ್ರಿಯಗಳ ಸೋಂಕೂ ಇಲ್ಲ. ಅವನು ಎಲ್ಲರಿಗೂ ಪ್ರಭು, ಈಶ್ವರ, ಆಶ್ರಯ ಮತ್ತು ಸ್ನೇಹಿತನು. *(ಶ್ವೇತಾಶ್ವತರೋಪನಿಷತ್, ೩:೧೭)*

ಲೋಕದಲ್ಲಿ ಅವನಿಗೆ ಒಡೆಯನಾಗಲಿ, ಈಶ್ವರನಾಗಲಿ ಇಲ್ಲ. ಅವನು ಅನುಮಾನಕ್ಕೆ ಕಾರಣನಲ್ಲ. ಬದಲಾಗಿ ಸರ್ವಕಾರಣನು. ಅವನು ಇಂದ್ರಿಯಗಳಿಗೆ ಒಡೆಯನಾದ ಜೀವಾತ್ಮನಿಗೂ ಒಡೆಯ. ಅವನಿಗೆ ಜನಕನಾಗಲಿ, ಅಧಿಪತಿಯಾಗಲಿ ಇಲ್ಲ. *(ಶ್ವೇತಾಶ್ವತರೋಪನಿಷತ್, ೬ : ೯)*

## ಕಾರ್ಯ–ಕಾರಣ ನಿಯಮ

ಮಾನವನು ತನ್ನ ಆಯ್ಕೆಗಳನ್ನು ಮಾಡಿಕೊಳ್ಳಲು ಮತ್ತು ಕಾರ್ಯ–ಕಾರಣ ನಿಯಮದ ಅನುಸಾರವಾಗಿ ತನ್ನ ಕರ್ಮಗಳಿಗೆ ಫಲಗಳನ್ನು ಪಡೆಯಲು ಭಗವಂತನು ತನ್ನ ಅನುಗ್ರಹ ಶಕ್ತಿಯ ಮೂಲಕ ವಿಪುಲ ಅವಕಾಶಗಳನ್ನು ತನ್ನ ಈ ವಿಶ್ವವ್ಯವಸ್ಥೆಯಲ್ಲಿ ಒದಗಿಸಿದ್ದಾನೆ. ವಿಶ್ವಾತ್ಮಕವಾದ ಈ ಕಾರ್ಯ–ಕಾರಣ ನಿಯಮವಿಲ್ಲದೆ ಹೋಗಿದ್ದರೆ, ಎಲ್ಲವೂ ಅನಿಯಂತ್ರಿತವಾಗಿರುತ್ತಿತ್ತು ಮತ್ತು ಅಲ್ಲಿ ಯಾವುದೇ ವ್ಯವಸ್ಥಿತ ಪ್ರಯತ್ನಕ್ಕೆ ಅವಕಾಶವಿರುತ್ತಿರಲಿಲ್ಲ. ಹಾಗಿದ್ದರೆ, ತಾನು ಬಿತ್ತಿದ್ದಕ್ಕಿಂತ ಬೇರೆಯದನ್ನೇ ಸಾಧಕನು ಬೆಳೆದುಕೊಳ್ಳುತ್ತಿದ್ದನು; ಕರ್ಮ ಮತ್ತು ಅದರ ಫಲಗಳು, ಕರ್ತವ್ಯಗಳು, ಜವಾಬ್ದಾರಿಗಳು, ಆಧ್ಯಾತ್ಮಿಕ ಸಾಧನೆಗಳನ್ನೂ ಸೇರಿಕೊಂಡು ಮಾನವ ಜೀವಿತದ ಎಲ್ಲ ಯಶಸ್ಸುಗಳು – ಇವೆಲ್ಲವನ್ನೂ ಒಳಗೊಂಡಿರುವ ಸಾಧಕನ ದೈನಂದಿನ ಜೀವನವು ಕೂಡ ಅರ್ಥಹೀನವಾಗಿಬಿಡುತ್ತಿತ್ತು. ತನ್ನ ದೋಷಗಳನ್ನು ಸರಿಪಡಿಸಿಕೊಳ್ಳಲು ಸಾಧಕನಿಗೆ ಅವಕಾಶವೇ ಇಲ್ಲವಾಗಿರುತ್ತಿತ್ತು. ಈ ಕಾರ್ಯ–ಕಾರಣ ನಿಯಮವು ನೈತಿಕ ನೆಲೆಯಲ್ಲಿ ಮುಮುಕ್ಷುವಿನ ಮೇಲೆ ಬಹು ದೊಡ್ಡ ಜವಾಬ್ದಾರಿಯನ್ನು ಹೊರಿಸಿದೆ. ಹಾಗೆಯೇ ಅದೇ ಸಮಯದಲ್ಲಿ, ಯಾರೊಬ್ಬರ

ಮಧ್ಯಸ್ಥಿಕೆ ಇಲ್ಲದೆ, ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನೂ ನೀಡಿದೆ. ಹೀಗೆ ಈ ನಿಯಮವು ಮಾನವನಿಗೆ ಒಂದು ದೊಡ್ಡ ವರಪ್ರಸಾದವೇ ಸರಿ. ಆದರೆ ಕೊನೆಗೆ ಅವನು ಇದನ್ನೂ ಮೀರಿ ಹೋಗಬೇಕು.

ಇಷ್ಟಾದರೂ, ಆಂತರಂಗಿಕ ಸಂಸ್ಕಾರಗಳ ಮೇಲೆ ಅವಲಂಬಿಸಿರುವ ಮುಮುಕ್ಷುವಿನ ಆಯ್ಕೆಯ ಸ್ವಾತಂತ್ರ್ಯ, ಅದರಿಂದ ಉಂಟಾಗುವ ಕಾರ್ಯ ಮತ್ತು ಕರ್ಮ ನಿಯಮ ಕೂಡ, ಭಗವಂತನ ಶಕ್ತಿಯ ಮೇಲೆಯೇ ನಿರ್ಭರವಾಗಿದೆ. ಒಬ್ಬ ವ್ಯಕ್ತಿಯ ಅರ್ಹತೆಗೆ ಅನುಸಾರವಾಗಿ ಅವನು ಕರ್ಮಫಲಗಳನ್ನು ಕೊಡುತ್ತಾನೆ.

**ಜಗತ್ಕಾರಣನಾದ ಪರಮಾತ್ಮನು (ಅಗ್ನಿ ಮೊದಲಾದವುಗಳಿಗೆ ಉಷ್ಣತೆಯೇ ಮೊದಲಾದ) ಸ್ವಭಾವವನ್ನುಂಟುಮಾಡುತ್ತಾನೆ. ಅವನು ಪರಿಣಾಮಕ್ಕೆ ಅರ್ಹವಾದ ಪೃಥಿವ್ಯಾದಿಗಳೆಲ್ಲವನ್ನೂ ಪರಿಣಮಿಸುವಂತೆ ಮಾಡುತ್ತಾನೆ. ಈ ವಿಶ್ವವೆಲ್ಲವನ್ನೂ ತಾನೊಬ್ಬನೇ ಆಳುತ್ತಾನೆ ಮತ್ತು ಸತ್ತ್ವಾದಿ ಗುಣಗಳನ್ನು (ತಮ್ಮ ಕಾರ್ಯಗಳಲ್ಲಿ) ನಿಯೋಜಿಸುತ್ತಾನೆ.**

*(ಶ್ವೇತಾಶ್ವತರೋಪನಿಷತ್, ೫:೫)*

**ಪರಮೇಶ್ವರನು ಪ್ರಕೃತಿಯ ಮತ್ತು ಜೀವಾತ್ಮರ ಪಾಲಕನು. ಸತ್ತ್ವಾದಿ ಗುಣಗಳ ಒಡೆಯನು. ಸಂಸಾರದಿಂದ ಮುಕ್ತಿಗೂ ಮತ್ತು ಸ್ಥಿತಿರೂಪವಾದ ಬಂಧನಕ್ಕೂ ಇವನೇ ಕಾರಣನಾಗಿದ್ದಾನೆ. ಅವನು ವಿಶ್ವದ ಕರ್ತೃವು, ಎಲ್ಲರ ಆತ್ಮ ಹಾಗೂ ಕಾರಣನು, ನಿತ್ಯಜ್ಞಾತೃ, ಕಾಲವನ್ನು ನಡೆಸುವವನು, ಗುಣಮಯನು ಮತ್ತು ಸರ್ವಜ್ಞನು.**

*(ಶ್ವೇತಾಶ್ವತರೋಪನಿಷತ್, ೬:೧೬)*

**ಪರಮೇಶ್ವರನು ಇಂದ್ರಾದಿ ದೇವತೆಗಳ ಉತ್ಪತ್ತಿಗೆ ಕಾರಣನು. ಅವನು ವಿಶ್ವಪಾಲಕನೂ, ಸರ್ವಜ್ಞನೂ ಆಗಿದ್ದಾನೆ. ಆ ರುದ್ರನು ನಮಗೆ ಶುಭಬುದ್ಧಿಯನ್ನು ಕೊಡಲಿ.** *(ಶ್ವೇತಾಶ್ವತರೋಪನಿಷತ್, ೪:೧೨)*

**ಆತ್ಮನು ಅನಿತ್ಯವಸ್ತುಗಳಲ್ಲಿ ನಿತ್ಯನು; ಚೇತನರಿಗೆ ಚೇತನನು; ಅವನು ಒಬ್ಬನೇ ಆಗಿದ್ದರೂ ಸಂಸಾರಿಗಳಿಗೆ ಅವರವರ ಕರ್ಮಗಳಿಗೆ ಅನುಗುಣವಾಗಿ ಕರ್ಮಫಲಗಳನ್ನು ಕೊಡುತ್ತಾನೆ.**

*(ಕಠೋಪನಿಷತ್, ೨:೨:೧೩)*

ಮೇಲಿನ ಮಂತ್ರಕ್ಕೆ ವ್ಯಾಖ್ಯಾನ ಮಾಡುತ್ತ ಶ್ರೀಶಂಕರಾಚಾರ್ಯರು ಹೀಗೆ ಹೇಳುತ್ತಾರೆ: ಸರ್ವಜ್ಞನಾದ ಸರ್ವೇಶ್ವರನು ಕಾಮಿಗಳಾದ ಸಂಸಾರಿಗಳಿಗೆ ಅವರವರ ಕರ್ಮಗಳಿಗೆ ಅನುಸಾರವಾಗಿ ಕಾಮನೆಗಳನ್ನು ಅಂದರೆ ಕರ್ಮಫಲಗಳನ್ನು ಕೊಡುತ್ತಾನೆ. ಅದಲ್ಲದೆ ತನ್ನ ಅನುಗ್ರಹನಿಮಿತ್ತವಾಗಿಯೂ ಕರ್ಮಫಲಗಳನ್ನು ನೀಡುತ್ತಾನೆ.

## ಮಾಯಾರೂಪ

ಋಷಿಮುನಿಗಳು ಈ ದಿವ್ಯಶಕ್ತಿಯ ಇನ್ನೊಂದು ಮುಖವನ್ನು ಗುರುತು ಮಾಡಿ ತೋರಿಸುತ್ತಾರೆ. ಮಾನವನ ಸ್ವಭಾವವು ದಿವ್ಯವಾದುದು. ಆದರೆ ಅದೇ ದಿವ್ಯಶಕ್ತಿಯ ಇನ್ನೊಂದು ಅಂಶವು ಮಾಯೆಯ ರೂಪದಲ್ಲಿ ಕಾರ್ಯವೆಸಗುತ್ತದೆ. ಮಾಯೆಯೆಂದರೆ ವಿಶ್ವಾತ್ಮಕ ಭ್ರಮೆ. ಇದು ವ್ಯಕ್ತಿಯೊಬ್ಬನನ್ನು ಕಾರ್ಯ–ಕಾರಣಗಳ ನಿಯಮದ ಬಂಧನಕ್ಕೆ ಸಿಲುಕಿಸುತ್ತದೆ. ಹೀಗೆ ಅವನನ್ನು ಸೀಮಿತಗೊಳಿಸಿ, ಆತನ ದೃಷ್ಟಿಯನ್ನು ಮಬ್ಬುಗೊಳಿಸುತ್ತದೆ. ಮಾಯೆಯ ಆವರಣ ಮತ್ತು ವಿಕ್ಷೇಪ ಶಕ್ತಿಗಳ ದೆಸೆಯಿಂದ ಅವನು ತನ್ನ ಮೂಲಕ ಹಾಗೂ ತನ್ನೆಲ್ಲ ಕಾರ್ಯಗಳ ಮೂಲಕ ಪ್ರವಹಿಸುತ್ತಿರುವ ದಿವ್ಯಶಕ್ತಿಯನ್ನು ದರ್ಶಿಸುವಲ್ಲಿ ವಿಫಲನಾಗುತ್ತಾನೆ. ಆಗವನು ತನ್ನ ಅಲ್ಪ ಸಾಧನೆಗೂ ತಾನೇ ಕಾರಣನೆಂದು ತಪ್ಪಾಗಿ ತಿಳಿಯುತ್ತಾನೆ. ಕೇನೋಪನಿಷತ್ತಿನಲ್ಲಿ ಬರುವ ಉಮಾ ಹೈಮವತೀ ಕಥೆಯು ಈ ಅಂಶವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ:

ದೇವತೆಗಳು ಮತ್ತು ದಾನವರಿಗೆ ನಡೆದ ಯುದ್ಧದಲ್ಲಿ, ಪರಮಶಕ್ತಿಯಾದ ಬ್ರಹ್ಮನು ದೇವತೆಗಳಿಗೆ ಜಯವನ್ನು ತಂದುಕೊಟ್ಟನು. ದೇವತೆಗಳಾದ ಅಗ್ನಿ, ವಾಯು ಮತ್ತು ಇಂದ್ರರು ಕಾರ್ಯ–ಕಾರಣಗಳ ನಿಯಮದಲ್ಲಿ ಸಿಲುಕಿದ್ದರು. ಆದ್ದರಿಂದಲೇ ಪರಮಾತ್ಮನ ಸೀಮಾತೀತ ಪರಶಕ್ತಿಯೇ ತನ್ನ ಅಗ್ರಾಹ್ಯವಾದ ಉದ್ದೇಶ ಸಾಧನೆಗಾಗಿ ಎಲ್ಲವನ್ನೂ ಮಾಡುತ್ತಿದೆ ಎಂಬರಿವು ಅವರಿಗಿರಲಿಲ್ಲ. ಬ್ರಹ್ಮವೇ ದರ್ಶನ, ಚಿಂತನ, ಕ್ರಿಯೆಗೆ ಪ್ರೇರಕವಾಗುವ ಬಲಗಳೆಂಬ ಸ್ವತಂತ್ರವೆಂಬಂತೆ ತೋರಿಬರುವ ಶಕ್ತಿಗಳೆಲ್ಲದರ ಗಣಿಯಾಗಿದೆ ಎಂಬುದನ್ನು ಅವರು ಅರಿತಿರಲಿಲ್ಲ. ಬ್ರಹ್ಮನು ಅವರಲ್ಲಿ ಮಿಥ್ಯಾ



ಅಹಂಕಾರವಿರುವುದನ್ನು ಕಂಡುಕೊಂಡನು. ತನ್ನ ಅಪಾರ ಕರುಣೆಯಿಂದ ಅವರನ್ನು ಈ ಅಜ್ಞಾನದಿಂದ ಬಿಡುಗಡೆ ಮಾಡಲು ಬಯಸಿದನು. ಅವರ ಮುಂದೆ ಗುಪ್ತರೂಪದಲ್ಲಿ ಬಂದು ನಿಂದನು. ದೇವತೆಗಳು ಒಂದಾದ ಮೇಲೊಂದರಂತೆ, ಒಬ್ಬ ದೇವತೆಯನ್ನು ಅವನೆಡೆಗೆ ಕಳುಹಿಸಿ, ಆ ಆರಾಧನಾಮೂರ್ತಿಯ ಪರಿಚಯವನ್ನು ಪಡೆಯಲೆತ್ನಿಸಿದರು. ಒಬ್ಬೊಬ್ಬನೂ ಆ ಚೈತನ್ಯಮೂರ್ತಿಯ ಹತ್ತಿರ ಹೋದಾಗಲೂ, ಅದು ಆತನ ಬಲವನ್ನು ಪ್ರದರ್ಶಿಸುವಂತೆ ಹೇಳುತ್ತಿತ್ತು.

ಆ ಚೈತನ್ಯಮೂರ್ತಿಯು ಒಂದು ಹುಲ್ಲುಕಡ್ಡಿಯನ್ನು ಆ ದೇವತೆಗಳ ಮುಂದೆ ಇಟ್ಟಿತು. ಅಗ್ನಿದೇವನು ಅದನ್ನು ಸುಡಲಾಗಲಿಲ್ಲ; ವಾಯುದೇವನು ಅದನ್ನು ಹಾರಿಸಿಕೊಂಡು ಹೋಗಲಾಗಲಿಲ್ಲ. ಹೀಗೆ ತನ್ನ ಅಶಕ್ತತೆಯಿಂದ ಸಂದೇಹಗೊಂಡ, ಅವಮಾನಗೊಂಡ ಅವರು ಸೋತು ದೇವತೆಗಳಿದ್ದೆಡೆಗೆ ಹಿಂದಿರುಗಿದರು. ಕಡೆಯಲ್ಲಿ ದೇವತೆಗಳ ರಾಜನಾದ ಇಂದ್ರನೇ ಮುಂದೆ ಬಂದ. ಅಷ್ಟುಹೊತ್ತಿಗೆ ಆ ಚೈತನ್ಯಮೂರ್ತಿಯು ಮಾಯವಾಗಿತ್ತು. ಅದರ ಸ್ಥಾನದಲ್ಲಿ ಅತ್ಯಂತ ಮನೋಹರವಾದ ಮತ್ತು ಮಂಗಳಕರವಾದ ಉಮಾ ಹೈಮವತಿಯು ಪ್ರಕಟವಾಗಿದ್ದಳು. ಬ್ರಹ್ಮನ ಅದ್ಭುತವಾದ ಶಕ್ತಿಯಿಲ್ಲದಿದ್ದರೆ, ಅತ್ಯಂತ ನಿಕೃಷ್ಟವಾದ ಕಾರ್ಯಗಳನ್ನು ಮಾಡುವುದೂ ಅಸಾಧ್ಯವೆಂಬ ದಿವ್ಯ ರಹಸ್ಯವನ್ನು ಅವಳು ಇಂದ್ರನಿಗೆ ಬೋಧಿಸಿದಳು.

## ದಿವ್ಯಾನುಗ್ರಹ

ಈ ಕಾರಣಕ್ಕಾಗಿಯೇ, ಈ ರಹಸ್ಯಾತ್ಮಕ ಮತ್ತು ಅಚಿಂತ್ಯ ಶಕ್ತಿಯ ಅನುಕಂಪದ ಅಂಶದ ಕಡೆಗೆ ಋಷಿಗಳು ಸಾಧಕನ ಗಮನವನ್ನು ಸೆಳೆಯುತ್ತಾರೆ. ಇದನ್ನೇ ದಿವ್ಯಾನುಗ್ರಹ ಎಂದು ಕರೆಯುತ್ತಾರೆ. ಇದು ಮಾತ್ರವೇ ಮಾಯೆಯ ಅಪಾಯಕಾರಿ ತೆಕ್ಕೆಯಿಂದ ಸಾಧಕನನ್ನು ಪಾರು ಮಾಡಬಲ್ಲುದು. ಆದ್ದರಿಂದ, ಆ ಅನುಗ್ರಹ ಶಕ್ತಿಯ ಕೃಪೆಗೆ ಪಾತ್ರರಾಗಿರೆಂದು ಋಷಿಗಳು ಸಾಧಕರನ್ನು ಹೀಗೆ ಆಗ್ರಹಿಸುತ್ತಾರೆ:

**ಯಾವುದರಲ್ಲಿ ಸರ್ವಪ್ರಾಣಿಗಳೂ ಜೀವಿಸುತ್ತವೆಯೋ ಮತ್ತು ಲಯವಾಗುತ್ತವೆಯೋ ಆ ಬೃಹತ್ತಾದ ಬ್ರಹ್ಮಚಕ್ರದಲ್ಲಿ ಜೀವನು ತಾನು ಬೇರೆ, ಈಶ್ವರನು ಬೇರೆ ಎಂದು ತಿಳಿದುಕೊಂಡು ಸುತ್ತುತ್ತಾನೆ. ಯಾವಾಗ ಅವನು ಈಶ್ವರನಿಂದ ಅನುಗ್ರಹಿಸಲ್ಪಡುತ್ತಾನೋ ಆಗ ಅಮೃತತ್ವವನ್ನು ಹೊಂದುತ್ತಾನೆ.** *(ಶ್ವೇತಾಶ್ವತರೋಪನಿಷತ್, ೧:೬)*

**ಯಾವನು ಅದ್ವಿತೀಯನಾಗಿದ್ದರೂ ಪ್ರತಿಯೊಂದು ಜೀವಿಯಲ್ಲಿ ಅಂತರ್ಯಾಮಿ ರೂಪದಿಂದ ಅಧಿಷ್ಠಾತೃವಾಗಿರುವನೋ, ಯಾವನಲ್ಲಿ ಎಲ್ಲವೂ ಪ್ರಳಯಕಾಲದಲ್ಲಿ ಲಯವಾಗುವುದೋ ಮತ್ತು ಸೃಷ್ಟಿಕಾಲದಲ್ಲಿ ವಿವಿಧ ರೂಪದಲ್ಲಿ ಉತ್ಪನ್ನವಾಗುವುದೋ ಅಂಥ ಮೋಕ್ಷಪ್ರದನೂ ಸ್ತುತಿಸಲ್ಪಡುವವನೂ ಪ್ರಭುವೂ ಆದ ದೇವನನ್ನು ಸಾಕ್ಷಾತ್ಕರಿಸಿಕೊಂಡವನು ಶಾಂತಿಯನ್ನು ಆತ್ಯಂತಿಕ ರೂಪದಿಂದ ಪಡೆಯುತ್ತಾನೆ.** *(ಶ್ವೇತಾಶ್ವತರೋಪನಿಷತ್, ೪:೧೧)*

**ಹೇ ರುದ್ರ, ಹೇ ಗಿರೀಶ, ಮಂಗಲಮಯವೂ ಅಘೋರವೂ ಪುಣ್ಯಪ್ರಕಾಶಕವೂ ಪೂರ್ಣಾನಂದರೂಪವೂ ಆದ ನಿನ್ನ ಶರೀರದ ಮೂಲಕ ನಮ್ಮನ್ನು ನೋಡು.** *(ಶ್ವೇತಾಶ್ವತರೋಪನಿಷತ್ ೩:೫)*

**ಈಗ ನನ್ನ ಪ್ರಾಣವಾಯುವು ಸಾವಿಲ್ಲದ ಸರ್ವಾತ್ಮನಾದ ಸೂತ್ರಾತ್ಮನನ್ನು ಸೇರಲಿ. ಈ ದೇಹವು ಬೂದಿಯಾಗಲಿ. ಓಂ, ಸಂಕಲ್ಪರೂಪವಾದ ಅಗ್ನಿಯೇ, ನಾನು ಮಾಡಿರುವುದನ್ನು ಸ್ಮರಿಸು.**

*(ಈಶಾವಾಸ್ಯೋಪನಿಷತ್, ೧೭)*

ಈ ದಿವ್ಯಶಕ್ತಿಯ ಇನ್ನೊಂದು ಅಂಶವು ಆಧ್ಯಾತ್ಮಿಕ ಗುರುಗಳಲ್ಲಿ ಜ್ವಲಂತ ಮತ್ತು ಪರಿವರ್ತನಾತ್ಮಕ ಶಕ್ತಿಯಾಗಿ ಕಂಡುಬರುತ್ತದೆ. ಹಾಗೆ ನೋಡಿದರೆ, ಭಗವಂತನ ಅನುಗ್ರಹದ ಪ್ರವಾಹವನ್ನು ತಾತ್ಕಾಲಿಕವಾದರೂ ಸಾಧಕನು ಭಾವಿಸುವುದು, ಈ ಗುರುಗಳ ಮೂಲಕವೇ. ಆ ಅದಮ್ಯ ಶಕ್ತಿಯ ಪವಿತ್ರ ಪ್ರವಾಹಕರು ಈ ಗುರುಗಳು.

**ಯಾವುದರಲ್ಲಿ ಸಮಸ್ತ ಜಗತ್ತೂ ಸಮರ್ಪಿತವಾಗಿದೆಯೋ, ಯಾವುದು ಶುದ್ಧವಾಗಿ ಪ್ರಕಾಶಿಸುತ್ತಿರುವುದೋ ಈ ಪರಮವಾದ ಬ್ರಹ್ಮವೆಂಬ ಸ್ಥಾನವನ್ನು ಬ್ರಹ್ಮಜ್ಞಾನಿಯು ತಿಳಿದಿರುವವನು. ನಿಷ್ಕಾಮರಾದ ಯಾರು ಈ ಆತ್ಮಜ್ಞನನ್ನು ಉಪಾಸಿಸುತ್ತಾರೋ ಆ ಧೀರರು ಈ ಶರೀರಧಾರಣೆಗೆ ಕಾರಣವಾದ ಸಂಸಾರವನ್ನು ಅತಿಕ್ರಮಿಸುತ್ತಾರೆ.**

*(ಮುಂಡಕೋಪನಿಷತ್, ೩:೨:೧)*

**ಸರಿಯಾದ ಕ್ರಮದಲ್ಲಿ ಗುರುವನ್ನು ಸಮೀಪಿಸಿರುವ, ಪ್ರಶಾಂತ ಮನಸ್ಸಿನಿಂದ ಕೂಡಿ, ಬಾಹ್ಯೇಂದ್ರಿಯಗಳ ಶಮನಮಾಡಿ ವಿರಕ್ತನಾಗಿರುವ ಜಿಜ್ಞಾಸುವಿಗೆ, ವಿದ್ವಾಂಸನಾದವನು ಬ್ರಹ್ಮವಿದ್ಯೆಯನ್ನು ಯಥಾವತ್ತಾಗಿ ಉಪದೇಶಿಸುವನು. ಇದರಿಂದ ಅಕ್ಷಯನಾದ ಪುರುಷನನ್ನು ತಿಳಿಯಬಹುದು.** *(ಮುಂಡಕೋಪನಿಷತ್, ೧:೨:೧೩)*

**ಏಳಿರಿ, ಎಚ್ಚರಗೊಳ್ಳಿರಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ.** *(ಕಠೋಪನಿಷತ್, ೧:೩:೧೪)*

**ಬ್ರಹ್ಮವು ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಕಣ್ಣಿನಿಂದಾಗಲಿ ಹೊಂದಲು ಶಕ್ಯವಲ್ಲ. ಇದ್ದಾನೆ ಎಂದು ಹೇಳುವವನನ್ನು ಬಿಟ್ಟು ಬೇರೆ ಯವರಲ್ಲಿ ಅದು ಹೇಗೆ ತಾನೇ ಲಭ್ಯವಾಗುವುದು?**

*(ಕಠೋಪನಿಷತ್, ೨:೩:೧೨)*

ಆಧ್ಯಾತ್ಮಿಕ ಜೀವನವು ಸಂಕೀರ್ಣವಾದುದು ಮತ್ತು ಸೂಕ್ಷ್ಮವಾದುದು. ಆದ್ದರಿಂದಲೇ ಅದು ಸತತವಾದ ಮತ್ತು ಸಮಗ್ರವಾದ ಪ್ರಯತ್ನವನ್ನು ಅಪೇಕ್ಷಿಸುತ್ತದೆ. ಹೀಗಾಗಿ ಆಧ್ಯಾತ್ಮಿಕ ಸಾಧಕನು ಅರ್ಹ ಗುರುವಿನಿಂದ ಮಾರ್ಗದರ್ಶನವನ್ನೂ ಸ್ಫೂರ್ತಿಯನ್ನೂ ಪಡೆದುಕೊಳ್ಳುವುದು ಅವಶ್ಯ. ಹೀಗೆಂದೇ ಉಪನಿಷತ್ತುಗಳು ಗುರು–ಶಿಷ್ಯರ ಬಾಂಧವ್ಯದ ಮೇಲೆ ಒತ್ತು ಕೊಡುತ್ತವೆ.

**ಅದನ್ನು (ಅಭಯವೂ ಮಂಗಳವೂ ನಿತ್ಯವೂ ಆದ ತತ್ತ್ವ) ತಿಳಿಯುವುದಕ್ಕಾಗಿ ಶಿಷ್ಯನಾದವನು ಸಮಿತ್ತುಗಳ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು, ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರುವನ್ನು ಹೊಂದಬೇಕು.** *(ಮುಂಡಕೋಪನಿಷತ್, ೧: ೨: ೧೨)*

ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಣೆಯನ್ನು ಕೊಡುತ್ತಾರೆ: "ಶಿಷ್ಯನಾದವನು, ತಾನು ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದ ಮಹಾನ್ ಪಂಡಿತನಾಗಿದ್ದರೂ

ಕೂಡ, ಬ್ರಹ್ಮವಿದ್ಯೆಯನ್ನು ಸ್ವತಂತ್ರವಾಗಿ ಅನ್ವೇಷಿಸಬಾರದು." ಶಿಷ್ಯನು ಗುರುವಿನ ಆಶೀರ್ವಾದದ ಆವಶ್ಯಕತೆಯನ್ನು, ಮುಖ್ಯವಾಗಿ ತನ್ನ ದುರ್ಭರ ಸಮಯದಲ್ಲಿ ಕಂಡುಕೊಳ್ಳುತ್ತಾನೆ. ಆಗ ಅವನು ಅತ್ಯಂತ ವಿನಯ ಮತ್ತು ಗೌರವಗಳಿಂದ ಅವನ ಬಳಿ ಸಮೀಪಿಸುತ್ತಾನೆ. ಗುರುವು ಈ ಮಾತುಗಳಿಂದ ಅವನನ್ನು ಹರಸುತ್ತಾನೆ:

**ತಮಸ್ಸಿನ ಆಚೆ ಇರುವ ದಡವನ್ನು ದಾಟುವ ನಿನ್ನ ಪ್ರಯತ್ನದಲ್ಲಿ ನಿನಗೆ ಶುಭವಾಗಲಿ.** *(ಮುಂಡಕೋಪನಿಷತ್, ೨:೨:೬)*

ಈ ಆಶೀರ್ವಾದವು ಆಧ್ಯಾತ್ಮಿಕ ಸಾಧಕನಿಗೆ ಅದಮ್ಯವಾದ ಬಲವನ್ನು ಮತ್ತು ಆಶ್ವಾಸನೆಯನ್ನು ಕೊಡುತ್ತದೆ; ಆತನ ಗುರಿಯತ್ತ ಅವನನ್ನು ಮುನ್ನಡೆಸುತ್ತದೆ.

ಅನುಗ್ರಹವೆಂಬುದು ಆಧ್ಯಾತ್ಮಿಕ ಸಾಧಕನಿಗೆ ಹಲವಾರು ವಿಧಗಳಲ್ಲಿ ಒದಗಿಬರುವಂಥದ್ದು; ಅನಿರ್ಬಂಧಿತವೂ, ಸಮೃದ್ಧವೂ ಕರುಣಾಪೂರ್ಣವಾಗಿಯೂ ಇರುವಂಥದ್ದು. ಅವನನ್ನು ಪ್ರತಿಯೊಂದು ಮೆಟ್ಟಿಲಿನಲ್ಲಿಯೂ ಕೈಹಿಡಿದು ನಡೆಸುವಂಥದ್ದು. ಮೊದ ಮೊದಲು ಸಾಧಕನು, ತಾನು ಕೇಳಿಕೊಂಡೋ ಇಲ್ಲದೆಯೋ, ತನ್ನ ಆಧ್ಯಾತ್ಮಿಕ ಸಾಧನಾಮಾರ್ಗದಲ್ಲಿ ಒದಗಿ ಬರುವ ಸಹಾಯವನ್ನು ಸ್ವೀಕರಿಸುತ್ತಾನೆ. ತನಗೆ ಅರ್ಹತೆ ಇಲ್ಲದಿದ್ದರೂ ಯಾವುದೋ ಅಳೆಯಲಾಗದ ಮೂಲದಿಂದ ದಯಪಾಲಿಸಲ್ಪಟ್ಟದ್ದು ಎಂದು ಅದನ್ನು ಭಾವಿಸುತ್ತಾನೆ. ಇದನ್ನೇ ಅವನು **ದಿವ್ಯಾನುಗ್ರಹ** ಎಂದು ಕರೆಯುವುದು. ಅವನು ಆಧ್ಯಾತ್ಮಿಕ ಪಥದಲ್ಲಿ ಮುಂದುವರಿದಂತೆಲ್ಲ, ಅವನ ಅಂತರ್ದೃಷ್ಟಿಯೂ ಗಾಢವಾಗುತ್ತ ಹೋಗುತ್ತದೆ. ಕಾರ್ಯ–ಕಾರಣ ನಿಯಮದ ಪ್ರಕಾರ ತನ್ನ ಪಾಲಿಗೆ ಬಂದ ಫಲಗಳೆಲ್ಲವೂ ಈ ದಿವ್ಯಶಕ್ತಿಯ ಕೃಪೆಯಿಂದ ಕೂಡ ತನಗೊದಗಿ ಬಂದಿವೆ ಎಂಬುದನ್ನು ಅವನು ಅರಿಯುತ್ತಾನೆ. ಆಧ್ಯಾತ್ಮಿಕ ಹೋರಾಟವನ್ನು ನಿಯಮಬದ್ಧವಾಗಿ ನಡೆಸಲು ಸಹಾಯ ಮಾಡಿದ ವಿಶ್ವನಿಯಮಗಳ ಅಸ್ತಿತ್ವದಲ್ಲಿ ಭಗವಂತನ ಅನುಗ್ರಹವನ್ನೇ ಅವನೀಗ ಕಾಣುತ್ತಾನೆ. ಅನಂತರ, ಎಂದು ಅವನು ಆಧ್ಯಾತ್ಮಿಕವಾಗಿ ಪರಿಪಕ್ವ ಸ್ಥಿತಿಯನ್ನು ಪಡೆಯುವನೊ ಅಂದು, ಅಂದರೆ ಭಗವಂತನನ್ನು ಮುಖಾಮುಖಿ ಕಂಡಾಗ, ಎಲ್ಲವೂ ಈ ದಿವ್ಯಶಕ್ತಿಯ ಅನುಗ್ರಹದಿಂದಲೇ ಸಾಧ್ಯವಾದದ್ದು ಎಂದು ಕಂಡುಕೊಳ್ಳುತ್ತಾನೆ. ತನ್ನ ಆಧ್ಯಾತ್ಮಿಕ ಜೀವನದ ಮೊದಲ ದಿನಗಳಲ್ಲಿ ಅಥವಾ ವರ್ತಮಾನ ಕಾಲದಲ್ಲಿ ತಾನು ಮಾಡಿದ, ಮಾಡುತ್ತಿರುವ ಪ್ರಯತ್ನಗಳು, ಆಧ್ಯಾತ್ಮಿಕ ಆಚಾರ್ಯರಿಂದ ತಾನು ಪಡೆದುಕೊಂಡ ಸ್ಫೂರ್ತಿ, ಆಧ್ಯಾತ್ಮಿಕ ಸಾಹಸದ ಎಲ್ಲ ಮುಖಗಳು ಮತ್ತು ಅಂತಿಮ ಸಾಕ್ಷಾತ್ಕಾರ – ಇವೆಲ್ಲವೂ ಭಗವಂತನ ಅನುಗ್ರಹಶಕ್ತಿಯ ಕೃಪೆಯಿಂದಲೇ ಆಗಿಹೋಗಿದ್ದು ಎಂಬರಿವು ಅವನಿಗೆ ಮೂಡುತ್ತದೆ. ಹೀಗೆ ಈ ಇಡೀ ಬ್ರಹ್ಮಾಂಡ, ಮೋಕ್ಷಕ್ಕಾಗಿ ತನ್ನ ಅನ್ವೇಷಣೆ ಮತ್ತು ಅದರ ಸಿದ್ಧಿ – ಇವೆಲ್ಲವೂ ಆ ದಿವ್ಯಶಕ್ತಿಯ ಲೀಲೆಯಲ್ಲದೆ ಮತ್ತೇನಲ್ಲ, ಅವರ್ಣನೀಯವಾದ ಸರ್ವಸ್ವತಂತ್ರವಾದ ಆ ದಿವ್ಯಶಕ್ತಿಯ ಸ್ವಚ್ಛಂದ ಕ್ರೀಡೆಯಲ್ಲದೆ ಇನ್ನೇನಲ್ಲ ಎಂದು ಅವನಿಗೆ ಆಗ ಮನವರಿಕೆಯಾಗುತ್ತದೆ.

## ಸ್ನೇಹಪ್ರಭ

**ನಾವು ಪಡುವ ಮಾನಸಿಕ ಹಾಗೂ ದೈಹಿಕ ಕಷ್ಟಗಳಿಗೆ ನಮ್ಮ ಕರ್ಮವೇ ಕಾರಣವೇ ಅಥವಾ ನಮ್ಮ ಆಲೋಚನಾವಿಧಾನ ಕಾರಣವೇ? ಅವುಗಳನ್ನು ಕಡಮೆ ಮಾಡಿಕೊಳ್ಳುವುದು ಹೇಗೆ?**

ನಾವು ಪಡುವ ಕಷ್ಟಗಳಿಗೆ ನಮ್ಮ ಕರ್ಮ ಮತ್ತು ಆಲೋಚನಾ ವಿಧಾನ ಎರಡೂ ಕಾರಣ. ಅಧ್ಯಾತ್ಮರಾಮಾಯಣದಲ್ಲಿ ಈ ಶ್ಲೋಕ ಬರುತ್ತದೆ : **ಸುಖಸ್ಯ ದುಃಖಸ್ಯ ನ ಕೋಪಿ ದಾತಾ ಪರೋ ದದಾತೀತಿ ಕುಬುದ್ಧಿರೇಷಾ । ಅಹಂ ಕರೋಮೀತಿ ವೃಥಾಭಿಮಾನಃ ಸ್ವಕರ್ಮ ಸೂತ್ರ ಗ್ರಥಿತೋ ಹಿ ಲೋಕಃ ॥** – "ಬೇರೆ ಯಾರೂ ನಮಗೆ ಸುಖದುಃಖಗಳನ್ನು ನೀಡುವುದಿಲ್ಲ. ಬೇರೆಯವರು ನೀಡುತ್ತಾರೆ ಎಂದು ಭಾವಿಸುವುದು ಕೀಳು ಮನೋಭಾವ. ನಾನು ಮಾಡುತ್ತೇನೆಂಬುದೂ ಪೊಳ್ಳು ಅಭಿಮಾನ. ತಮ್ಮ ತಮ್ಮ ಕರ್ಮಗಳ ಹಗ್ಗದಿಂದ ಜನರು ಬಂಧಿಸಲ್ಪಟ್ಟಿದ್ದಾರೆ." ಇದೇ ಭಾವನೆಯನ್ನು ಸೂಫಿಸಂತ ಜಲಾಲುದಿನ್ ರೂಮಿ ಈ ಕೆಳಗಿನಂತೆ ಸುಂದರವಾಗಿ ವ್ಯಕ್ತಪಡಿಸಿದ್ದಾನೆ: "ನಿನ್ನ ಕಾಲಿಗೆ ಮುಳ್ಳು ಚುಚ್ಚಿದರೆ ಅದನ್ನು ನೆಟ್ಟವನು ನೀನೇ; ನೀನು ರೇಷ್ಮೆ ಬಟ್ಟೆ ಧರಿಸಿದ್ದರೆ ಅದನ್ನು ನೆಯ್ದವನೂ ನೀನೇ."

ವ್ಯಕ್ತಿಯು ತನ್ನ ಆಲೋಚನೆಯಂತಿರುತ್ತಾನೆ. ಮನಸ್ಸೇ ಮನುಷ್ಯನನ್ನು ರೂಪಿಸುವುದು. "ಮಾನವನೆಂದರೆ ದೇಹವನ್ನು ಹೊಂದಿರುವ ಮನಸ್ಸು, ಮನಸ್ಸನ್ನು ಹೊಂದಿರುವ ದೇಹವಲ್ಲ." ಸುಖದುಃಖಗಳೆಲ್ಲವೂ ನಮ್ಮ ಮಾನಸಿಕ ಆಲೋಚನೆಗಳನ್ನು ಅವಲಂಬಿಸಿರುತ್ತವೆ. ಮನಸ್ಸು ಸರಿಯಿಲ್ಲದಿದ್ದರೆ ಸುಖವೂ ದುಃಖವಾಗಬಹುದು. ಮನಸ್ಸು ಸರಿಯಿದ್ದರೆ ದುಃಖವೂ ಪ್ರಯೋಜನಕಾರಿಯಾಗಬಹುದು. ನಾವು ಒಂದು ಉನ್ನತ ಆದರ್ಶವನ್ನು ಇಟ್ಟುಕೊಂಡು ಅದಕ್ಕನುಗುಣವಾಗಿ ನಮ್ಮ ಜೀವನವನ್ನು ನಡೆಸುತ್ತಿದ್ದರೆ ಜೀವನ ಒಂದು ಅರ್ಥಪೂರ್ಣವಾಗುತ್ತದೆ. ಆಗ ಜೀವನಕ್ಕೆ ಸಂಬಂಧಪಟ್ಟ ಎಲ್ಲವೂ ಅರ್ಥಪೂರ್ಣವಾಗುತ್ತದೆ. ಒಂದು ವರ್ಣಚಿತ್ರದ ಮುಖ್ಯ ಭಾವನೆ ಅರ್ಥವಾಗದಿದ್ದಾಗ ಅದರಲ್ಲಿರುವ ಎಷ್ಟೋ ಗೆರೆಗಳು ನಮಗೆ ಅನವಶ್ಯಕವಾಗಿ ಕಾಣಬಹುದು, ಅರ್ಥವನ್ನು ತಿಳಿದಾಗ ಎಲ್ಲವೂ ಅರ್ಥಪೂರ್ಣವಾಗುತ್ತದೆ.

ಅನೇಕರು ದುಃಖವನ್ನು ಅನುಭವಿಸುವುದು ತಾವೊಂದು ಬಲಿಪಶು (victim attitude) ಎಂದು ಭಾವಿಸುವುದರಿಂದ. ಆಗ ಪ್ರತಿಯೊಂದು ಘಟನೆಯೂ ಅವರನ್ನು ವಿಚಲಿತರನ್ನಾಗಿಸುತ್ತದೆ. ಸಣ್ಣಪುಟ್ಟದಕ್ಕೂ ಅವರು upset ಆಗುತ್ತಾರೆ. ಅವರನ್ನು ಮುಟ್ಟುವುದೇ ಕಷ್ಟ ಎಂಬಂತಿರುತ್ತಾರೆ (touchy). ಅವರು ಒಳಗಡೆ ಒಂದು ಸಾರ್ಥಕತೆಯ ಭಾವವನ್ನು ಅನುಭವಿಸುತ್ತಿದ್ದರೆ ಹೀಗಾಗುವುದಿಲ್ಲ. ಒಂದು ಆದರ್ಶಕ್ಕಾಗಿ ಹೋರಾಡುತ್ತ ಅದರಲ್ಲಿ ಸಾರ್ಥಕತೆಯನ್ನು ಕಾಣುತ್ತ ತುಂಬುಜೀವನವನ್ನು ನಡೆಸಿದರೆ ಕಷ್ಟಗಳು ನಮಗೆ ಸಹ್ಯವಾಗುತ್ತವೆ, ಕಡಮೆಯಾಗುವುದಿಲ್ಲ – ಸಹ್ಯವಾಗುವುದರಿಂದ ಕಡಮೆಯಾದಂತೆ ಅನಿಸಬಹುದು. ಅನೇಕರು ಆದರ್ಶದಿಂದ ತಮ್ಮ ಮನ ತುಂಬುವುದರ ಬದಲು ದೇಹವನ್ನು ತುಂಬುತ್ತಾರೆ ಮತ್ತು ಅಹಂಕಾರವನ್ನು ತುಂಬಿಸಲು ಪ್ರಯತ್ನಿಸುತ್ತಾರೆ. ದೇಹವಾದರೂ ತುಂಬೀತು, 'ಅಹಂ' ಗೆ ಎಷ್ಟೇ ತುಂಬಿಸಿದರೂ ಅದರ ಹಸಿವು ನೀಗುವುದೇ ಇಲ್ಲ. **ಉನ್ನತ ಆಧ್ಯಾತ್ಮಿಕ ಆದರ್ಶಗಳಿಂದ ಮಾತ್ರ ಈ ಹಸಿವನ್ನು ನೀಗಿಸಬಹುದು. ಆಗ ಕಷ್ಟಗಳು ತಮ್ಮ ತೀವ್ರತೆಯನ್ನು ಕಳೆದುಕೊಳ್ಳುತ್ತವೆ.**

(**ಬರಹ:** ಸ್ವಾಮಿ ನಿತ್ಯಸ್ಥಾನಂದ)